ಅಸಲು ದಾವಾ ಸಂಖ್ಯೆ - 124/2014
ಪಿಡಬ್ಲ್ಯೂ - 01
ದಿನಾಂಕಃ 18-09-2019
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ವಿ ಬಿ ಟಿ ವಕೀಲರಿಂದ

ನನ್ನ ತಂದೆಗೆ ನಾನು ಮತ್ತು ಭೀಮಪ್ಪ ಎನ್ನುವ ಮಕ್ಕಳು ಇರುತ್ತೇವೆ. ಭೀಮಪ್ಪ ಮತ್ತು ಆತನ ಹೆಂಡತಿ ಮರಣ ಹೊಂದಿದ್ದಾನೆ. ಭೀಮಪ್ಪನಿಗೆ ಇಬ್ಬರು ಹೆಂಡತಿಯರು. 1 ನೇ ಹೆಂಡತಿಗೆ ಒಬ್ಬ ಮಗ. 2 ನೇ ಹೆಂಡತಿಗೆ ಮೂರು ಜನ ಮಕ್ಕಳು. ಭೀಮಪ್ಪ ತನ್ನ 1 ನೇ ಹೆಂಡತಿಗೆ ಶಿವಕ್ಕ ಮರಣ ಹೊಂದಿದ



ನಂತರ 2 ನೇ ಮದುವೆಯನ್ನು ಮಾಡಿಕೊಂಡಿದ್ದನು. ದಾವಾ ಆಸ್ತಿಗಳ ಪೈಕಿ ಸರ್ವೆ ನಂ.201/7 ಎ ನನ್ನ ಹೆಸರಿನಲ್ಲಿದೆ. ಸರ್ವೆ ನಂ. 197/4 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಸರ್ವೆ ನಂ.201/7 ಬಿ ನನ್ನ ಹೆಸರಿನಲ್ಲಿದೆ. ಸರ್ವೆ ನಂ.206/2 ನನ್ನ ಮತ್ತು ಭೀಮಪ್ಪನ ವಾರಸುದಾರರ ಹೆಸರು ದಾಖಲು ಇದೆ. ಸರ್ವೆ ನಂ.206/2 ಕ್ಕೆ ನನ್ನ ಹಾಗೂ ಭೀಮಪ್ಪನ ವಾರಸುದಾರರ ಹೆಸರು ದಾಖಲು ಆಗುವ ಪೂರ್ವದಲ್ಲಿ ಸದರಿ ಆಸ್ತಿ ನನ್ನ ತಂದೆಯ ಹೆಸರಿನಲ್ಲಿತ್ತು. ನನ್ನ ಹೆಸರು ಪಹಣಿ ಪತ್ರಿಕೆಯಲ್ಲಿ ಸುಮಾರು 20 ವರ್ಷಗಳ ಹಿಂದೆ ದಾಖಲಾಗಿತ್ತು. ನನ್ನ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗುವ ಕಾಲಕ್ಕೆ ನನ್ನ ಸಹೋದರನಾದ ಭೀಮಪ್ಪನ ಹೆಸರು ಬೇರೆ ಆಸ್ತಿಗಳಿಗೆ ದಾಖಲಾಗಿದ್ದವು ಎಂದರೆ ಸರಿ. ಆದೇ ಕಾಲಕ್ಕೆ ಸರ್ವೆ ನಂ.206/2 ನನ್ನ ತಂದೆಯ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸರಿ. ನಮ್ಮ ಮನೆತನಕ್ಕೆ ಒಂದು ಮನೆ ಇದೆ. ಆ ಮನೆಯಲ್ಲಿ ನನ್ನ ಅಣ್ಣನ 2 ನೇ ಹೆಂಡತಿಯ ಮಕ್ಕಳು ಮತ್ತು ನಾನು ವಾಸವಾಗಿದ್ದೇವೆ. ಸದರಿ ಮನೆ ಎರಡೂ ಹಿಸ್ಸೆಯಾಗಿದ್ದು ನನ್ನ ಹೆಸರಿನಲ್ಲಿ ಒಂದು ಹಿಸ್ಸೆ, ಭೀಮಪ್ಪನಿಗೆ ಒಂದು ಹಿಸ್ಸೆ ಬಂದಿತ್ತು. ಎರಡೂ ಹಿಸ್ಸೆಗಳ ಖಾತೆಗಳು ಪ್ರತ್ಯೇಕವಾಗಿವೆ. ನನ್ನ ಹೆಸರಿನಲ್ಲಿರುವ ಮನೆ ಮತ್ತು ಭೀಮಪ್ಪನ ಮಕ್ಕಳು ಹೆಸರಿನಲ್ಲಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಮನೆ ನಮ್ಮ ತಂದೆಯಿಂದ ಬಂದಿತ್ತು. ಸದರಿ ಮನೆಗಳ ಖಾತೆಗಳನ್ನು ಸುಮಾರು 8-9 ವರ್ಷಗಳ ಹಿಂದೆ ಮಾಡಿಕೊಂಡಿದ್ದೇವೆ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಮನೆತನಕ್ಕೆ ಬೇರೆ ಯಾವುದೇ ಜಮೀನು ಇಲ್ಲ.

ಸರ್ವೆ ನಂ. 196/4 ರಲ್ಲಿ ಕ್ಷೇತ್ರ 4 ಎಕರೆ 5 ಗುಂಟೆ ಪೈಕಿ 2 ಎಕರೆ ಜಮೀನನ್ನು ನಾನು 1997 ರಲ್ಲಿ ಮಾರಾಟ ಮಾಡಿದ್ದೇನೆ. ಹೇಮಪ್ಪ ತಂದೆ ಮರಬಸಪ್ಪ ಗುಂಜಳ ಇವರಿಗೆ ಸರ್ವೆ ನಂ.196/4 ರಲ್ಲಿ ಜಮೀನನ್ನು ಸಂಪೂರ್ಣವಾಗಿ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಸದರಿ ಜಮೀನನ್ನು ನಾನು ಒಬ್ಬನೇ ಮರಾಟ ಮಾಡಿದ್ದೇನೆ ಎಂದರೆ ಸರಿ. 1978 ನೇ ಸಾಲಿನಲ್ಲಿ ನನ್ನ ಹೆಸರಿಗೆ ಖಾತೆಯಾಗಿದ್ದು ತದನಂತರ ಮೇಲೆ ಹೇಳಿದ ಜಮೀನನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿ. ಎಮ್ ಇ ನಂ. 5023 ರ ಪ್ರಕಾರ ನಮ್ಮ ಹೆಸರುಗಳನ್ನು ಪ್ರತ್ಯೇಕವಾಗಿ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿ. 1978 ನೇ

ಸಾಲಿನಿಂದ ನಮ್ಮ ಹೆಸರಿಗೆ ದಾಖಲಾದ ಪಹಣಿ ಪ್ರಕಾರ ನಾವು ಪ್ರತ್ಯೇಕವಾಗಿ ಸಾಲ ಪಡೆದುಕೊಂಡಿದ್ದೇವೆ ಎಂದರೆ ಸರಿ. 1997 ರಲ್ಲಿ ಮಾರಾಟ ಮಾಡಿದ ಜಮೀನು ಮತ್ತು ಸರ್ವೆ ನಂ.201/7 ಎ ನನ್ನ ಹಿಸ್ಸೆಗೆ ಬಂದಿದ್ದವು. ಮಕ್ಕಳ ಮದುವೆ ಸಲುವಾಗಿ 1997 ರಲ್ಲಿ ಜಮೀನನ್ನು ಮಾರಾಟ ಮಾಡಿದ್ದೇನೆ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.